# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-04. ಬೆಳಗಾವಿ-591 156.

**web site**: www.rcub.ac.in ದೂರವಾಣಿ ಸಂಖ್ಯೆ:0831-2565208, 2565219 **E-mail:** directorcdcrcu@gmail.com

## ಅಧಿಸೂಚನೆ ಪ್ರಕಟಣೆ

ಕ್ರಮ ಸಂ. ರಾಚವಿ/ಬೆಳಗಾವಿ/ಸಿ.ಡಿ.ಸಿ(ಸಂಯೋಜನೆ)/2019-20/2990 ದಿನಾಂಕ: 15-10-2019.

**ವಿಷಯ: 2020-21 ನೇ ಶೈಕ್ಷಣಿಕ ಸಾಲಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ವಿವಿಧ ಬಗೆಯ ಸಂಯೋಜನೆ, ಸಂಶೋಧನಾ ಕೇಂದ್ರ ಹಾಗೂ ಸ್ವಾಯತ್ತ ಸ್ಥಾನಮಾನದ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11-10-2019.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ ಬರುವ ಸರಕಾರದ ನಿಯಮಾವಳಿಯಂತೆ ನೊಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳಿಂದ, 2020-21 ನೇ ಶೈಕ್ಷಣಿಕ ಸಾಲಿಗಾಗಿ ಹೊಸದಾಗಿ ಮಹಾವಿದ್ಯಾಲಯ ಪ್ರಾರಂಭಿಸಲು ಮತ್ತು 2019-20 ನೇ ಸಾಲಿನಲ್ಲಿ ತಾತ್ಕಾಲಿಕ/ ಶಾಶ್ವತ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಪ್ರಾಚಾರ್ಯರಿಂದ ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ./ ಎಂ.ಎಸ್.ಡಬ್ಲ್ಯೂ. ಹಾಗೂ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ/ಡಿಪ್ಲೊಮೋ/ ಪಿ.ಜಿ.ಡಿಪ್ಲೊಮೋ ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಮುಂದುವರಿಕೆ, ಸಂಶೋಧನಾ ಕೇಂದ್ರ ಮತ್ತು ಸ್ವಾಯತ್ತ ಸ್ಥಾನಮಾನ ಇತ್ಯಾದಿ ಸಂಯೋಜನೆಗಳಿಗೆ ನಿಗದಿತ ನಮೂನೆಯ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಯೋಜನಾ ಶುಲ್ಕ ಮತ್ತು ಸಂಬಂಧಿಸಿದ ಇತರ ಶುಲ್ಕಗಳ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಯಾವುದೇ ಸಂಘ/ಸಂಸ್ಥೆ/ಮಹಾವಿದ್ಯಾಲಯ ಸ್ನಾತಕ ಕೋರ್ಸ ಪ್ರಾರಂಭಿಸಿ ಕನಿಷ್ಠ ಐದು ವರ್ಷಗಳನ್ನು ಮುಗಿಸಿದ ಮಹಾವಿದ್ಯಾಲಯ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಬಹುದಾಗಿದೆ ಮತ್ತು ಎಂ.ಬಿ.ಎ./ ಎಂ.ಸಿ.ಎ./ ಎಂ.ಇಡಿ./ ಎಂ.ಪಿ.ಇಡಿ. ಕೋರ್ಸ ಪ್ರಾರಂಭಿಸಲು ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ. ಯವರಿಂದ ಮಾನ್ಯತೆ ಅವಶ್ಯವಿರುತ್ತದೆ. ಸಂಯೋಜನೆಗೆ ಸಂಬಂಧಿಸಿದ ವಿವಿಧ ಬಗೆಯ ಅರ್ಜಿ ನಮೂನೆ, ಸಂಯೋಜನೆಯ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.rcub.ac.in ದಲ್ಲಿ CDC Link ನಲ್ಲಿ Affiliation Notification-2020-21 ನಲ್ಲಿ ವಿವರವಾದ ಮಾಹಿತಿ ಪಡೆಯಬಹುದಾಗಿದೆ ಸಂಯೋಜನೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಮತ್ತು ಸ್ಪಷ್ಟಿಕರಣಕ್ಕಾಗಿ ನಿರ್ದೇಶಕರು, ಸಿ.ಡಿ.ಸಿ. ವಿಭಾಗದ ದೂರವಾಣಿ ಸಂಖ್ಯೆ: 0831-2565219, 208 ಕ್ಕೆ ಸಂಪರ್ಕಿಸಬಹುದಾಗಿದೆ.

| ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ಗಮನಿಸಬೇಕಾದ ಪ್ರಮುಖ ದಿನಾಂಕಗಳು | | |
|---|---|---|
| 01 | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | 18-11-2019 |
| 02 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/- ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | 25-11-2019 |
| 03 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/- ಮತ್ತು ಪ್ರತಿ ದಿನ ರೂ.1,200/- ರಂತೆ ದಂಡ ಶುಲ್ಕದೊಂದಿಗೆ ದಿನಾಂಕ | 30-11-2019 |
| **ಸೂಚನೆ: ದಿನಾಂಕ: 30-11-2019 ರ ನಂತರ ನೀಡುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.** | | |

| ಸಹಿ/- | ಸಹಿ/- |
|---|---|
| **ಪ್ರೊ. ಎಸ್. ಎಂ. ಹುರಕಡ್ಲಿ** | **ಪ್ರೊ. ಬಸವರಾಜ ಪದ್ಮಶಾಲಿ** |
| ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ | ಕುಲಸಚಿವರು |
| ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |

# Rani Channamma University, Belagavi.

**Viday Sangam, Poona-Bangalore N.H.-04. Belagavi-591 156.**

**web site**: www.rcub.ac.in **Phone No**:0831-2565208, 2565219 **E-mail:** directorcdcrcu@gmail.com


## Notification

**Ref No. RCU/Belagavi/CDC(Affiliation)/2019-20/2990** **Date: 15-10-2019**

**Sub:** Inviting Application for fresh affiliation for UG/PG courses and other courses, Research centre and Autonomous Institution for the year 2020-21.

**Ref:** Hon'ble Vice-Chancellor order date: 11-10-2019.

Applications for Affiliation are invited from the registered society/body or registered public trust to apply for fresh affiliation for starting under-graduate and Post-graduate courses for B.A./B.Sc./B.Com. /BBA BCA/ BSW/ B.Ed./ B.P.Ed./ M.A./ M.Com./M.Sc. /M.S.W. Diploma/ P. G. Diploma and Certificate Courses in Yoga, Research Centre, Autonomous Institution and other courses along with Continuation/Extension/New courses/Subjects/Intake increase/Permanent and Permanent Renewal affiliation etc. The existing college offered both of UG/PG Courses, located in Belagavi, Vijayapur and Bagalkot districts which are coming under the jurisdiction of Rani Channamma University for the year 2020-21. All Education Society's/Education Trusts should be running under-graduate course/courses for a minimum period of 5 years to apply for P.G. Courses. For applying for P.G.Courses like MBA/MCA/M.Ed./M.P.Ed. etc. prior approval/recognition from the statutory bodies like AICTE/NCTE is required and essential. The details of application form, fees structure and other information is available in the university web-site (address www.rcub.ac.in). For more details visit CDC link: Affiliation Notification-2020-21. Any clarification or information please contact CDC phone No-0831-2565219, 208 on all working days.

| **Important dates to receive Affiliation applications** | | |
|---|---|---|
| 01 | Last date for submission of application without penal fees. | 18-11-2019 |
| 02 | Last date for submission of application with penal fees Rs.10,000/- | 25-11-2019 |
| 03 | Last date for submission of application with penal fees Rs.10,000/- and Per day Rs.1,200/- | 30-11-2019 |
| Note: No application will be accepted after 30-11-2019. | | |

| Sd/-<br>**Prof. S. M. Hurakadli**<br>Director, College Development Council (CDC)<br>Rani Channamma University, Belagavi. | Sd/-<br>**Prof. Basavaraj Padmashali**<br>Registrar<br>Rani Channamma University, Belagavi. |
|---|---|

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-04. ಬೆಳಗಾವಿ-591 156.

ದೂರವಾಣಿ ಸಂಖ್ಯೆ: 0831-2565208, 2565219 **E-mail:** directorcdcrcu@gmail.com


ಕ್ರಮ ಸಂಖ್ಯೆ: ರಾಚವಿ/ಬೆಳಗಾವಿ/ಸಿ.ಡಿ.ಸಿ(ಸಂಯೋಜನೆ)/2019-20/2990/1 ದಿನಾಂಕ: 15-10-2019.

**ವಿಷಯ : 2020-21 ನೇ ಶೈಕ್ಷಣಿಕ ಸಾಲಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ಸಂಯೋಜನೆ, ಸಂಶೋಧನಾ ಕೇಂದ್ರ ಹಾಗೂ ಸ್ವಾಯತ್ತ ಸ್ಥಾನಮಾನದ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಗಳಲ್ಲಿ 2020-21 ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಮಹಾವಿದ್ಯಾಲಯ ಪ್ರಾರಂಭಿಸಲು ಮತ್ತು 2019-20 ನೇ ಸಾಲಿನಲ್ಲಿ ತಾತ್ಕಾಲಿಕ/ ಶಾಶ್ವತ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಪ್ರಾಚಾರ್ಯರಿಂದ ವಿವಿಧ ಕೋರ್ಸಗಳ ಮುಂದುವರಿಕೆ/ ವಿಸ್ತರಣೆ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಪರಿಶೀಲನೆ/ ಹೊಸ ಕೋರ್ಸ/ ವಿಷಯ/ ಪ್ರವೇಶಮಿತಿ ಹೆಚ್ಚಳ/ಡಿಪ್ಲಮೋ/ಪಿ.ಜಿ.ಡಿಪ್ಲಮೋ ಹಾಗೂ ಇತ್ಯಾದಿ ಸಂಯೋಜನೆಗಳಿಗೆ ನಿಗದಿತ ಸಂಯೋಜನಾ ಶುಲ್ಕ ಮತ್ತು ಸಂಬಂಧಿಸಿದ ಇತರೆ ಶುಲ್ಕ ಪಾವತಿಯೊಂದಿಗೆ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿದೆ.

1. **ನೊಂದಾಯಿತ ಸಂಘ ಸಂಸ್ಥೆ/ ಸಾರ್ವಜನಿಕ ಟ್ರಸ್ಟಗಳು ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೊಸ ಸ್ನಾತಕ ಮಹಾವಿದ್ಯಾಲಯ ಪ್ರಾರಂಭಿಸಲು.**
2. **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳ ಮುಂದುವರಿಕೆ ಮತ್ತು ವಿಸ್ತರಣೆ.**
3. **ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕ ಕೋರ್ಸ/ ಹೊಸ ಸ್ನಾತಕೋತ್ತರ ಕೋರ್ಸ/ ಹೊಸ ವಿಷಯ ಪ್ರಾರಂಭಿಸಲು.**
4. **ಅಸ್ತಿತ್ವದಲ್ಲಿರುವ ಸ್ನಾತಕ ಕೋರ್ಸಗಳಿಗೆ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಹಾಗೂ ಕನಿಷ್ಠ ಮೂರು ಬ್ಯಾಚ್ ವಿದ್ಯಾರ್ಥಿಗಳು ತೇರ್ಗಡೆಯಾದ ಸ್ನಾತಕೋತ್ತರ ಕೋರ್ಸಗಳಿಗೆ ಮಾತ್ರ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ.**
5. **ಸತತವಾಗಿ ಐದು ವರ್ಷಗಳ ಕಾಲ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದಿರುವ ಕೋರ್ಸಗಳಿಗೆ ಶಾಶ್ವತ ಸಂಯೋಜನೆ ಪಡೆಯಲು.**
6. **ಈಗಾಗಲೇ ಮಹಾವಿದ್ಯಾಲಯಗಳಿಗೆ/ ಕೋರ್ಸಗಳಿಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಮುಂದುವರಿಕೆ ಪಡೆದಿರುವ ಸಂಯೋಜನೆಯು 2019-20 ನೇ ಶೈಕ್ಷಣಿಕ ಸಾಲಿಗೆ ಕೊನೆಗೊಳ್ಳುತ್ತಿದ್ದರೆ, ಅಂತಹ ಮಹಾವಿದ್ಯಾಲಯಗಳು/ ಕೋರ್ಸಗಳಿಗೆ ಕಡ್ಡಾಯವಾಗಿ ಶಾಶ್ವತ ಸಂಯೋಜನೆ ಪರಿಶೀಲನೆಗೆ ಒಳಪಡಲು ಸಂಬಂಧಿಸಿದ ಶುಲ್ಕಗಳೊಂದಿಗೆ ಅರ್ಜಿ ಸಲ್ಲಿಸುವುದು.**
7. **ಎಂ.ಬಿ.ಎ./ ಎಂ.ಸಿ.ಎ. ಕೋರ್ಸ ಪ್ರಾರಂಭಿಸುವವರು AICTE ಯವರ ಮತ್ತು ಬಿ.ಇಡಿ./ ಬಿ.ಪಿ.ಇಡಿ./ ಎಂ.ಇಡಿ./ ಎಂ.ಪಿ.ಇಡಿ./ಬಿ.ಎ.ಇಡಿ./ಬಿ.ಎಸ್ಸಿ.ಇಡಿ. ಕೋರ್ಸ ಪ್ರಾರಂಭಿಸುವವರು NCTE ಯವರ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆದುಕೊಂಡು ಅರ್ಜಿ ಸಲ್ಲಿಸಬೇಕು.**
8. **ಸತತ 10 ವರ್ಷಗಳ ಕಾಲ ಸಂಯೋಜನೆ ಪಡೆದು ಪ್ರಸ್ತುತ ನ್ಯಾಕ್ ಸಂಸ್ಥೆಯಿಂದ "ಎ" ಗ್ರೇಡ್ ಮಾನ್ಯತೆ ಪಡೆದಿರುವ ಮಹಾವಿದ್ಯಾಲಯದವರು ಸ್ವಾಯತ್ತತೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದು.**
9. **ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದು.**

## ವಿಶೇಷ ಸೂಚನೆಗಳು

1. ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.rcub.ac.in ದಲ್ಲಿ CDC Link ನಲ್ಲಿ Affiliation Notification 2020-21 ನಲ್ಲಿರುವ ವಿವಿಧ ಬಗೆಯ ಸಂಯೋಜನಾ ಅರ್ಜಿ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಂಡ ಸಂಪೂರ್ಣವಾಗಿ ಭರ್ತಿ ಮಾಡಿ, ಸಂಬಂಧಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿ ಹಾಗೂ ತಾವು ಸಲ್ಲಿಸುವ ಸಂಯೋಜನಾ ಅರ್ಜಿಗೆ ಸಂಬಂಧಿಸಿದ ಶುಲ್ಕದ ಪಾವತಿಯೊಂದಿಗೆ ಎರಡು ಪ್ರತಿಗಳಲ್ಲಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ-591 156 ಇವರಿಗೆ ಸಲ್ಲಿಸುವುದು.

2. ಸಂಯೋಜನೆಗಾಗಿ ಭರಿಸಬೇಕಾದ ಎಲ್ಲ ಶುಲ್ಕಗಳನ್ನು ತಮ್ಮ ಹತ್ತಿರದ ಸಿಂಡಿಕೇಟ ಬ್ಯಾಂಕಿನ ಯಾವುದೇ ಶಾಖೆಯ ಮೂಲಕ **"ಹಣಕಾಸು ಅಧಿಕಾರಿಗಳು, ರಾ.ಚ.ವಿ. ಬೆಳಗಾವಿ ಇವರ ಹೆಸರಿನಲ್ಲಿ ಸಿಂಡಿಕೇಟ ಬ್ಯಾಂಕನಲ್ಲಿರುವ ಖಾತೆ ಸಂಖ್ಯೆ: 05522200017220 (IFSC No. SYNB0000552)** ಗೆ ಚಲನ್ ಮೂಲಕವೆ ಭರಿಸಿ ವಿಶ್ವವಿದ್ಯಾಲಯದ ಪ್ರತಿಯನ್ನು ಕಳುಹಿಸುವುದು. ಅಥವಾ ಡಿ.ಡಿ. ಮೂಲಕ ಭರಿಸಿದ ಮಹಾವಿದ್ಯಾಲಯದವರು ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಮೂಲ ಡಿ.ಡಿ. ಯನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪ್ರಕಟಣೆಯಲ್ಲಿ ತಿಳಿಸಿದ ಕೊನೆಯ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು. ಶುಲ್ಕಗಳನ್ನು ಭರಿಸದೆ ಕೇವಲ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿ/ ಪ್ರಸ್ತಾವನೆಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

3. ಸಂಯೋಜನೆಗಾಗಿ ಭರಿಸಬೇಕಾದ ಶುಲ್ಕ ಭರಸಿ ಚಲನ್/ಡಿ.ಡಿ. ತಮ್ಮಲ್ಲಿಯೆ ಇಟ್ಟುಕೊಂಡು ಪ್ರಕಟಣೆಯಲ್ಲಿ ತಿಳಿಸಿದ ಕೊನೆಯ ದಿನಾಂಕದ ಒಳಗಾಗಿ ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿ/ಪ್ರಸ್ತಾವನೆಗಳನ್ನು ಸ್ವೀಕರಿಸಲು ಅವಕಾಶವಿರುವುದಿಲ್ಲ.
4. ಕರ್ನಾಟಕ ರಾಜ್ಯ ಸರ್ಕಾರದ ಆದೇಶಾನುಸಾರ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಆಡಳತ ಮಂಡಳಿಯವರು ನಡೆಸುವ ಮಹಾವಿದ್ಯಾಲಯಗಳಿಗೆ **ಸಂಯೋಜನಾ ಶುಲ್ಕದಲ್ಲಿ ಮಾತ್ರ ಶೇಕಡಾ 50% ರಷ್ಟು ವಿನಾಯತಿ ನೀಡಲಾಗಿದೆ.** ಸದರಿ ವಿನಾಯತಿ ಪಡೆಯಲು ಸಂಬಂಧಿಸಿದ ಪ್ರಾಧಿಕಾರದಿಂದ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಆಡಳತ ಮಂಡಳಿಯವರು ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಇಲ್ಲದಿದ್ದಲ್ಲಿ ಶೇ.50% ಸಂಯೋಜನಾ ಶುಲ್ಕದ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.
5. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಸರಕಾರ ಮತ್ತು ವಿಶ್ವವಿದ್ಯಾಲಯ ನೀಡಿರುವ ಆದೇಶ/ ಅಧಿಸೂಚನೆಗಳಲ್ಲಿರುವಂತೆ ಮಹಾವಿದ್ಯಾಲಯದ ಹೆಸರನ್ನೇ ಅರ್ಜಿಯಲ್ಲಿ ಉಪಯೋಗಿಸಬೇಕು/ಮುಂದುವರೆಸುವುದು.
6. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (MHRD) ನವದೆಹಲಿ ಇವರ ನಿರ್ದೇಶನದಂತೆ 2019-20 ನೇ ಸಾಲಿನ DCF-II ಫೈಲನ್ನು AISHE ವೆಬ್‌ಸೈಟಗೆ (www.aishe.ac.nic.in) ಕಡ್ಡಾಯವಾಗಿ ಅಪ್‌ಲೋಡ್ ಮಾಡಿರಬೇಕು.
7. ಸರಕಾರದ ಉನ್ನತ ಶಿಕ್ಷಣ ಇಲಾಖೆಯವರು 2020-21 ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನಾ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಜರುಗಿಸಲು ಸೂಚಿಸಿದಲ್ಲಿ ಸದರಿ ಅಧಿಸೂಚನೆಯನ್ವಯ ಎರಡು ಪ್ರತಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹ ಎಲ್ಲ ಮಹಾವಿದ್ಯಾಲಯದವರು ಮತ್ತೊಮ್ಮೆ ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈ ವಿಷಯಕ್ಕೆ ಕುರಿತು ವಿಶ್ವವಿದ್ಯಾಲಯದಿಂದ ಪ್ರತ್ಯೇಕವಾಗಿ ಸುತ್ತೋಲೆ ಹೊರಡಿಸಲಾಗುವದು.
8. ಯು.ಜಿ.ಸಿ., ಕರ್ನಾಟಕ ಸರಕಾರ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಅಧಿನಿಯಮ (Act), ಪರಿನಿಯಮ (Statutes), ನಿಯಮ ಮತ್ತು ನಿಬಂಧನೆ (Rules and Regulations) ಆಧ್ಯಾದೇಶ (Ordinance), ಮತ್ತು ನಿರ್ದೇಶನಗಳಿಗೆ ಹಾಗೂ ರಾ.ಚ.ವಿ. ನಿಯಮಾವಳಿಗಳ ಪ್ರಕಾರ ತುಂಬಬೇಕಾದ ಎಲ್ಲ ರೀತಿಯ ಶುಲ್ಕಗಳನ್ನು ಭರಿಸಲು ಬದ್ಧರಾಗಿರುವುದಾಗಿ ತಿಳಿಸುವ ಮುಚ್ಚಳಿಕೆ ಪತ್ರ (Undertaking Letter) ವನ್ನು ಅರ್ಜಿಯೊಡನೆ ಕಡ್ಡಾಯವಾಗಿ ಲಗತ್ತಿಸಿರಬೇಕು.
9. ಸಂಯೋಜನಾ ಅರ್ಜಿಯಲ್ಲಿ ಸರಿಯಾದ ಮಾಹಿತಿ ಒದಗಿಸಬೇಕು ಹಾಗೂ ತಾವುಗಳು ಆರಂಭಿಸಬೇಕೆಂದಿರುವ ಮೂಲ ವಿಷಯ ಹಾಗೂ ಐಚ್ಛಿಕ ವಿಷಯಗಳನ್ನು ಪ್ರತ್ಯೇಕವಾಗಿ ಹಾಗೂ ಸ್ಪಷ್ಟವಾಗಿ ನಮೂದಿಸಿರಬೇಕು. ಒಂದು ವೇಳೆ ಅರ್ಜಿಯಲ್ಲಿ ಸರಿಯಾಗಿ/ ಸ್ಪಷ್ಟವಾಗಿ ಮಾಹಿತಿ ತುಂಬದೆ ಇದ್ದಲ್ಲಿ ಅದರಿಂದ ಉಂಟಾಗುವ ಗೊಂದಲ/ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೆ ಹೊಣೆಗಾರರಾಗಿರುತ್ತಾರೆ.
10. ಹೊಸದಾಗಿ ಆರಂಭಿಸಲಾಗುವ ಮಹಾವಿದ್ಯಾಲಯಗಳಾಗಲಿ ಅಥವಾ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಾಗಲಿ ಸರ್ಕಾರ/ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 60 ರಂತೆ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ಹೆಚ್ಚುವರಿಯಾಗಿ ಪ್ರವೇಶ ಪಡೆದ ಯಾವುದೇ ಒಬ್ಬ ವಿದ್ಯಾರ್ಥಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 61 ರಂತೆ ಮಹಾವಿದ್ಯಾಲಯ/ ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಹೆಚ್ಚುವರಿ ಪ್ರವೇಶ ತೆಗೆದುಕೊಂಡಲ್ಲಿ ಮುಂದೆ ಆಗು ಹೋಗುಗಳಿಗೆ ಮಹಾವಿದ್ಯಾಲಯವೆ ಜವಾಬ್ದಾರಿಯಾಗಿರುತ್ತದೆ.
11. ಮಹಾವಿದ್ಯಾಲಯವು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ದ ಯಾವುದೇ ಉಪಬಂಧಗಳನ್ನು ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಮಹಾವಿದ್ಯಾಲಯವನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಅಂಥಹ ಮಹಾವಿದ್ಯಾಲಯದ ಸಂಯೋಜನೆಯನ್ನು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಉಪಪ್ರಕರಣ 63 ರಂತೆ ಹಿಂತೆಗೆದುಕೊಂಡಲ್ಲಿ ಅಥವಾ ಮಹಾವಿದ್ಯಾಲಯ/ ಸಂಸ್ಥೆಯವರು ಸ್ವಯಂ ಇಚ್ಛೆಯಿಂದ ಕೋರ್ಸನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಉಪಪ್ರಕರಣ 65 ರ ಪ್ರಕಾರ ಸ್ವ-ಇಚ್ಛೆಯಿಂದ ಸ್ಥಗಿತಗೊಳಿಸಲು ಇಚ್ಛಿಸಿ, ಪ್ರಕ್ರಿಯಾ ಶುಲ್ಕ ರೂ.10,000/-ಗಳನ್ನು ಭರಿಸಿ, ಮನವಿ ಮಾಡಿಕೊಂಡಲ್ಲಿ, ಮಹಾವಿದ್ಯಾಲಯವು ಸ್ಥಗಿತಗೊಳಿಸಲು ಇಚ್ಛಿಸುವ ಕೋರ್ಸಗಳಿಗೆ ಸಂಬಂಧಿಸಿ ವಿಶ್ವವಿದ್ಯಾಲಯಕ್ಕೆ ಭರಿಸಿದ ಠೇವಣಿ ಮೊತ್ತದಲ್ಲಿ 20% ರಷ್ಟು ಕಡಿತಗೊಳಿಸಿ, ಉಳಿದ ಹಣವನ್ನು ಮರಳಿಸಲಾಗುವುದು.
12. ಮಹಾವಿದ್ಯಾಲಯದವರು ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿಯು ಪರಿಶೀಲನಾ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಪೂರ್ವದಲ್ಲಿ ತಾವು ಸಲ್ಲಿಸಿದ ಸಂಯೋಜನಾ ಅರ್ಜಿಯನ್ನು ಹಿಂಪಡೆಯಲು ಮನವಿ ಮಾಡಿಕೊಂಡಲ್ಲಿ ತಾವು ಭರಿಸಿದ ಶುಲ್ಕದಲ್ಲಿ 25% ಸಂಸ್ಕರಣಾ ಮೊತ್ತ ಕಡಿತಗೊಳಿಸಿ, ಇನ್ನುಳಿದ 75% ರಷ್ಟು ಹಣವನ್ನು ಮಾತ್ರ ಮರಳಿ ಕೊಡಲಾಗುವುದು. ಒಂದು ವೇಳೆ ತನಿಖಾ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಿದಲ್ಲಿ ಯಾವುದೇ ಶುಲ್ಕವನ್ನು ಮರಳಿ ನೀಡಲಾಗುವುದಿಲ್ಲ.

13. ಸರ್ಕಾರಿ ಆದೇಶ ನಂ. ಇಡಿ/240/ಯು.ಆರ್.ಸಿ/2000 ದಿನಾಂಕ : 14-12-2004 ರ ಮೇರೆಗೆ ಸರ್ಕಾರಿ ಕಾಲೇಜುಗಳ ಸಂಯೋಜನೆಗೆ ಸರ್ಕಾರಿ ಕಾಲೇಜುಗಳಲ್ಲಿನ ನೂತನ ಕೋರ್ಸಗಳಿಗೆ/ವಿಷಯಕ್ಕೆ/ಭಾಷೆಗೆ/ ವಿದ್ಯಾರ್ಥಿ ಪ್ರಮಾಣದ ಹೆಚ್ಚಳ ಹಾಗೂ ಮುಂದುವರಿಕೆ/ವಿಸ್ತರಣೆ ಮತ್ತು ಶಾಶ್ವತ ಸಂಯೋಜನೆಗೆ ವಿಶ್ವವಿದ್ಯಾಲಯಗಳಿಗೆ ಸಂದಾಯ ಮಾಡಬೇಕಾದ ಸಂಯೋಜನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಆದರೆ ಸರಕಾರಿ ಮಹಾವಿದ್ಯಾಲಯದವರು ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದರೆ ದಂಡ ಶುಲ್ಕ ಆಕರಿಸಲಾಗವುದು. ಹಾಗೂ ನಿಗದಿತ ಸಂಯೋಜನಾ ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕಾಗುತ್ತದೆ.

14. ಹೀಗೆ ಸಲ್ಲಿಸಲಾಗುವ ಸಂಯೋಜನಾ ಅರ್ಜಿಗಳು ಸರಿಯಾಗಿ ಭರ್ತಿ ಮಾಡಿರುವ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿರುವ ಬಗ್ಗೆ ಪರಿಶೀಲಿಸಿ, ಸ್ವೀಕರಿಸಲಾಗುವುದು. ಅಪೂರ್ಣ ಮಾಹಿತಿ/ ದಾಖಲೆಗಳನ್ನು ಒಳಗೊಂಡ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

15. ಹೀಗೆ ತಿರಸ್ಕರಿಸಲಾದ ಅರ್ಜಿಗಳನ್ನು ಸರಿಪಡಿಸಿ ನಿಗದಿತ ದಿನಾಂಕದ ಒಳಗೆ ಸಂಬಂಧಿಸಿದ ಶುಲ್ಕಗಳೊಂದಿಗೆ ಮರು ಸಲ್ಲಿಸದೇ ಇದ್ದಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ದಂಡಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

16. ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯ ನಿದಿಪಡಿಸಿರುವ ವಿಷಯಗಳಿಗೆ/ ಕೋರ್ಸಗಳಿಗೆ ಮಾತ್ರ ಸಂಯೋಜನೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಬೇಕು.

17. ಸಂಯೋಜನೆಯ ಶುಲ್ಕದ ಜೊತೆಗೆ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಅಥ್ಲೇಟಿಕ್ ಕ್ರೀಡಾ ಕೂಟವನ್ನು ಸಂಘಟಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲ ಸಂಯೋಜಿತ ಮಹಾವಿದ್ಯಾಲಯದವರು ಒಂದು ವರ್ಷಕ್ಕೆ Initial Contribution ಹಣ ರೂ.1,000/- ಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜನರಲ್ ಫಂಡ ಖಾತೆ ಸಂಖ್ಯೆ **05522200016658** ಗೆ **(IFSC No. SYNB0000552)** ಲೆಕ್ಕ ಶೀರ್ಷಿಕೆ ಸಂಖ್ಯೆ: 205 ರಲ್ಲಿ ಚಲನ್ ಮೂಲಕ ಪ್ರತ್ಯೇಕವಾಗಿ ಭರಿಸಬೇಕು. ಅಥವಾ ಡಿ. ಡಿ. ಮೂಲಕ ಭರಿಸುವವರು ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹೆಸರಿನಲ್ಲಿ ಡಿ.ಡಿ. ಪಡೆಯಬೇಕು. ಚಲನ್ ಮತ್ತು ಡಿ.ಡಿ.ಯನ್ನು ಸಂಯೋಜನಾ ಅರ್ಜಿ ಸಲ್ಲಿಸುವ ವೇಳೆಯಲ್ಲಿ ಪ್ರತ್ಯೇಕ ಪತ್ರದ ಮೂಲಕ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ-591 156 ಇವರಿಗೆ ಸಲ್ಲಿಸಬೇಕು.

## ಸಂಯೋಜನಾ ಅರ್ಜಿ ಸಲ್ಲಿಸಬೇಕಾದ ವಿಧಾನ

1. ಪ್ರಸ್ತುತ ವರ್ಷ ಪ್ರಾರಂಭಿಸಬೇಕಾದ ಮಹಾವಿದ್ಯಾಲಯವನ್ನು ಮುಂದಿನ ವರ್ಷ ಪ್ರಾರಂಭಿಸಬೇಕೆಂದು ಸ್ಥಾನಿಕ ತನಿಖಾ ಸಮಿತಿಯ ಶಿಫಾರಸ್ಸು ಮಾಡಿದ್ದಲ್ಲಿ, ಅಥವಾ ಸಂಬಂಧಪಟ್ಟ ಸಂಸ್ಥೆಯವರೆ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ಮಹಾವಿದ್ಯಾಲಯದವರು ಆ ಕುರಿತು ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದ ಇತರೆ ಶುಲ್ಕಗಳೊಂದಿಗೆ ಕೋರ್ಸಿನ ಮುಂದುವರಿಕೆ ಶುಲ್ಕವನ್ನು ತುಂಬಬೇಕಾಗುತ್ತದೆ.

2. ಸ್ಥಳೀಯ ತನಿಖಾ ಸಮಿತಿಯು ಮಹಾವಿದ್ಯಾಲಯಗಳಲ್ಲಿ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆಗಳನ್ನು ಮನಗಂಡು, ಸುಧಾರಿಸಿಕೊಳ್ಳಲು ಷರತ್ತುಗಳನ್ನು ವಿಧಿಸಿ, ಸದರಿ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿದ್ದಲ್ಲಿ, ಅಂತಹ ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಅವಧಿಯೊಳಗೆ ಮರುಪರಿಶೀಲನೆಗೆ ನಿಗದಿಪಡಿಸಿದ ಶುಲ್ಕವನ್ನು ಚಲನ್/ಡಿ.ಡಿ. ಯೊಂದಿಗೆ ಭರಿಸಿ, ಸ್ಥಳಿಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಪೂರೈಸಿದ ಕುರಿತಾಗಿ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ನಿಗದಿಪಡಿಸಿದ ಅವಧಿಯ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ವಿಶ್ವವಿದ್ಯಾಲಯದ ನಿರ್ದೇಶನವನ್ನು ಪಾಲಿಸಲು ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಫಲವಾದಲ್ಲಿ ಅಂತಹ ಮಹಾವಿದ್ಯಾಲಯಗಳ/ ಆಡಳಿತ ಮಂಡಳಿಯವರು ಸಂಬಂಧಿಸಿದ ಸಂಯೋಜನೆಗೆ ನಿರಾಸಕ್ತಿ ಹೊಂದಿರುವುದಾಗಿ ತಿಳಿದು, ಸಂಯೋಜನೆ ಹಿಂಪಡೆದಿರುವುದಾಗಿ ಪರಿಗಣಿಸಿ ಯಾವುದೇ ಹಿಂಬರಹ ನೀಡದೆ ಅಂತಹ ಅರ್ಜಿಗಳನ್ನು ಮುಕ್ತಾಯಗೊಳಿಸಲಾಗುವುದು.

3. ಅರ್ಜಿಯೊಂದಿಗೆ ಸಂಬಂಧಿಸಿದ ಲಗತ್ತುಗಳನ್ನು ನಿಗದಿಪಡಿಸಿದ ಅರ್ಜಿಯಲ್ಲಿ ಭರ್ತಿ ಮಾಡಿ, ಲಗತ್ತಿಸಬೇಕಾದ ಅಡಕಗಳಿಗೆ ವಿಶ್ವವಿದ್ಯಾಲಯ ನಿಗದಿಪಡಿಸಿದ ಅಡಕ ಸಂಖ್ಯೆಯನ್ನೇ ನಮೂದಿಸಿ, ಅನುಕ್ರಮವಾಗಿ ಜೋಡಿಸಿ ಅಚ್ಚುಕಟ್ಟಾಗಿ **ಸ್ಪೈರಲ್ ಬೈಂಡ ಮಾಡಿ ಎರಡು ಪ್ರತಿಗಳಲ್ಲಿ** ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-04, ಬೆಳಗಾವಿ-591 156 ಇವರಿಗೆ ನಿಗದಿತ ದಿನಾಂಕದ ಒಳಗೆ ಖುದ್ದಾಗಿ ಸಲ್ಲಿಸುವುದು. **(ಮುಂದುವರಿಕೆ/ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವವರು ಎರಡು ಪ್ರತಿಯಲ್ಲಿ ಮತ್ತು ಇನ್ನಿತರ ಹೊಸ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವವರು ಮೂರು ಪ್ರತಿಗಳಲ್ಲಿ ಅರ್ಜಿ ಸಲ್ಲಿಸುವುದು.)**

## I. ಹೊಸ ಮಹಾವಿದ್ಯಾಲಯ/ ಹೊಸ ಕೋರ್ಸ ಸಂಯೋಜನೆ.

1. ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಸರ್ಕಾರದ ನಿಯಮಾವಳಿಗಳ ಪ್ರಕಾರ ನೋಂದಾಯಿತವಾಗಿರತಕ್ಕದ್ದು ಮತ್ತು ಟ್ರಸ್ಟ್/ಸಂಘ ಸಂಸ್ಥೆಯ ಪೋಟ್/ಬೈಲಾ ನಿಯಮಗಳನ್ನು ಹೊಂದಿರಬೇಕು.

2. ಮಹಾವಿದ್ಯಾಲಯ ಹೊಂದಿರುವ ಕಟ್ಟಡವು ಕೃಷಿಯೇತರ ಭೂಮಿಯಾಗಿರಬೇಕು. (N.A. ಮಾಡಿಸಿರಬೇಕು)

3. ಟ್ರಸ್ಟ್/ಸಂಘ ಸಂಸ್ಥೆಯವರು ಸ್ವಂತ ಕಟ್ಟಡವನ್ನು ಹೊಂದಿರಬೇಕು ಒಂದು ವೇಳೆ ಬಾಡಿಗೆ ಕಟ್ಟಡವನ್ನು ಹೊಂದಿದ್ದರೆ 5 ವರ್ಷದ ಬಾಡಿಗೆ ಕರಾರು ಪತ್ರ ಹೊಂದಿರಬೇಕು ಹಾಗೂ ತರಗತಿಗಳಿಗೆ, ಕಛೇರಿ ಕಾರ್ಯಾಲಯಕ್ಕೆ, ಗ್ರಂಥಾಲಯಕ್ಕೆ ಮತ್ತು ಆಟದ ಮೈದಾನಕ್ಕೆ ಅವಶ್ಯವಿರುವಷ್ಟು ಸ್ಥಳಾವಕಾಶ ಇರಬೇಕು. ವಿಜ್ಞಾನ/ ಇನ್ನಿತರ ಪ್ರಯೋಗಾಲಯದ ವಿಭಾಗವಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ಪ್ರಯೋಗಾಲಯ ಹೊಂದಿರಬೇಕು ಹಾಗೂ ಪಠ್ಯಕ್ರಮದನ್ವಯ ಪ್ರಯೋಗಾಲಯಗಳ ಸಿದ್ಧತೆ ಮಾಡಿಕೊಂಡಿರಬೇಕು.

4. ಟ್ರಸ್ಟ್/ಸಂಘ ಸಂಸ್ಥೆಯು ಪ್ರಾರಂಭಿಸಲು ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಕಾಲೇಜಿಗೆ ಅರ್ಹ ಪ್ರಾಂಶುಪಾಲರನ್ನು ಮತ್ತು ಪ್ರಾರಂಭಿಸಲಿರುವ ಕೋರ್ಸುಗಳಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೂರ್ಣಕಾಲಿಕ ಉಪನ್ಯಾಸಕರನ್ನು ಖಾಯಂ ನೆಲೆಯಲ್ಲಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಕಛೇರಿಗೆ ಅವಶ್ಯಕತೆಗೆ ತಕ್ಕಂತೆ ಅಧೀಕ್ಷಕರು, ಗುಮಾಸ್ತರು ಹಾಗೂ ಇಬ್ಬರು ಜವಾನರನ್ನು ನೇಮಕ ಮಾಡಿಕೊಳ್ಳತಕ್ಕದ್ದು.
5. ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ (ಬಿ.ಇಡಿ., ಬಿ.ಪಿ.ಇಡಿ., ಎಂ.ಇಡಿ., ಎಂ.ಪಿ.ಇಡಿ., **ಬಿ.ಎ.ಇಡಿ., ಬಿ.ಎಸ್ಸಿ.ಇಡಿ.,**) ಮಹಾವಿದ್ಯಾಲಯ ಪ್ರಾರಂಭಿಸುವವರು ಎನ್.ಸಿ.ಟಿ.ಇ. ಇವರಿಂದ ಮತ್ತು ಎಂ.ಬಿ.ಎ., ಎಂ.ಸಿ.ಎ. ಕೋರ್ಸನೊಂದಿಗೆ ಮಹಾವಿದ್ಯಾಲಯವನ್ನು ಪ್ರಾರಂಭಿಸುವವರು ಎ.ಐ.ಸಿ.ಟಿ.ಇ. ಇವರಿಂದ ಮಾನ್ಯತೆಯನ್ನು ಕಡ್ಡಾಯವಾಗಿ ಪಡೆದಿರಬೇಕು.
6. ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು, ಸಂಬಂಧಿಸಿದ ವಿಷಯದಲ್ಲಿ ಪದವಿ ಕೋರ್ಸನ್ನು ಸತತ ಐದು ವರ್ಷಗಳ ಕಾಲ ನಡೆಸಿರಬೇಕು ಮತ್ತು ಸದರಿ ಪದವಿ ಕೋರ್ಸಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯದಲ್ಲಿಯೆ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಉದ್ದೇಶಿಸಿರಬೇಕು. ಅಲ್ಲದೆ ಸ್ಥಳೀಯ ತನಿಖಾ ಸಮಿತಿಗಳು ವಿಧಿಸಿದ ಈ ಹಿಂದಿನ ಎಲ್ಲಾ ಶರತ್ತುಗಳನ್ನು ಸಂಪೂರ್ಣವಾಗಿ ಹಾಗೂ ಕಡ್ಡಾಯವಾಗಿ ಪೂರೈಸಿರಬೇಕು. ಹೀಗೆ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಬೋಧಕ ಸಿಬ್ಬಂದಿಯನ್ನು ಹೊಂದಿರಬೇಕು. ಇವರುಗಳಲ್ಲಿ ಇಬ್ಬರು ಪಿಎಚ್.ಡಿ. ಪದವಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಅಂದರೆ ಸರಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ: 1) ಇಡಿ 99 ಯುಎನ್ಇ 2002 ದಿನಾಂಕ: 02-11-2002, 2) ಇಡಿ 107 ಯುಆರ್‌ಸಿ 2006 ದಿನಾಂಕ: 21-08-2006 ರ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಮೂಲಭೂತ ಸೌಲಭ್ಯ ಹೊಂದಿರುವ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಬಯಸಿದಲ್ಲಿ ಪ್ರತಿಯೊಂದು ಕೋರ್ಸಿಗೂ ಪ್ರತ್ಯೇಕವಾಗಿ ಮೂರು ಪ್ರತಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
7. ಹೊಸದಾಗಿ ಪ್ರಾರಂಭಿಸಲಿರುವ ಬಿ.ಸಿ.ಎ., ಬಿ.ಬಿ.ಎ., ಬಿ.ಎಸ್.ಡಬ್ಲ್ಯೂ. ಗಳಂತಹ ಇನ್ನಿತರ ಸ್ನಾತಕ ವೃತಿಪರ ಕೋರ್ಸಗಳನ್ನು ಹಾಗೂ ಸ್ನಾತಕೋತ್ತರ ಕೋರ್ಸ ಪ್ರಾರಂಭಿಸಲು ಪ್ರೀ-ಕ್ವಾಲಿಫಿಕೇಶನ್ ಅರ್ಜಿ ಸಲ್ಲಿಸಬೇಕು. ಈ ಅರ್ಜಿಗಳಿಗೆ ಸಂಬಂಧಿಸಿ ವಿಶ್ವವಿದ್ಯಾಲಯದ ಸ್ಥಾನಿಕ ತನಿಖಾ ಸಮಿತಿಯವರು ಪರಿಶೀಲಿಸಿ, ಕೋರ್ಸ ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದಲ್ಲಿ ಮಾತ್ರ ಮುಂದಿನ ಕ್ರಮ ಜರುಗಿಸಲು ಅವಕಾಶವಿರುತ್ತದೆ.
8. ಹೊಸದಾಗಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ಧೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಉದ್ದೇಶಿತ ಮಹಾವಿದ್ಯಾಲಯವನ್ನು ನಡೆಸಲು ವಿಶ್ವವಿದ್ಯಾಲಯ/ ಸರ್ಕಾರ/ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ./ ಇತ್ಯಾದಿ ಸಂಬಂಧಿಸಿದ ಪ್ರಾಧಿಕಾರಗಳ ನಿಯಮಾವಳಿಗಳಂತೆ ಕೃಷಿಯೇತರ ಭೂಮಿಯನ್ನು ಒಳಗೊಂಡಂತೆ ಇನ್ನಿತರ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

## II. ಮುಂದುವರಿಕೆ ಹಾಗೂ ವಿಸ್ತರಣೆ ಸಂಯೋಜನಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.

1. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯದವರು ಸಂಯೋಜನೆ ಮುಂದುವರಿಕೆ/ ವಿಸ್ತರಣೆಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡಿ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿ, ಸಂಬಂಧಿಸಿದ ಶುಲ್ಕಗಳನ್ನು ಭರಿಸಿ ಸಲ್ಲಿಸತಕ್ಕದ್ದು.
2. ಸಂಯೋಜನೆ ಮಂಜೂರಾತಿಯಾದ ಮಹಾವಿದ್ಯಾಲಯಗಳು ಆಯಾ ಕೋರ್ಸಿನ ವರ್ಗಗಳ ವಿಷಯ/ ಕೋರ್ಸಗಳಿಗೆ ಮುಂದಿನ ಶೈಕ್ಷಣಿಕ ಸಾಲಿಗೆ ಮಂಜೂರಾತಿಯನ್ನು ನೀಡುವಾಗ ಮುಂದುವರಿಕೆ ಸಂಯೋಜನೆ ಎಂದು ಪರಿಗಣಿಸಲಾಗುವುದು ಮತ್ತು ಸದರಿ ಕಾಲೇಜಿನವರು ಇತರೆ ಶುಲ್ಕಗಳೊಂದಿಗೆ ಮುಂದುವರಿಕೆ ಶುಲ್ಕಗಳನ್ನು ಭರಿಸಬೇಕಾಗುತ್ತದೆ ಹಾಗೂ ನಂತರದ ಸೆಮಿಸ್ಟರ್/ ತರಗತಿಗಳ (2/3 ವರ್ಷಗಳಿಗೆ) ಕೋರ್ಸ ಹಾಗೂ ಹೊಸ ವಿಷಯಗಳ ಸಂಯೋಜನೆಗೆ ವಿಸ್ತರಣಾ ಸಂಯೋಜನೆ ಎಂದು ಪರಿಗಣಿಸಲಾಗುವುದು ಮತ್ತು ಇದಕ್ಕೆ ನಿಗದಿ ಪಡಿಸಿದ ವಿಸ್ತರಣಾ ಶುಲ್ಕಗಳನ್ನು ಭರಿಸಬೇಕಾಗುತ್ತದೆ.
3. ಮಹಾವಿದ್ಯಾಲಯಗಳು ಸಂಯೋಜನೆ ಪಡೆದಿರುವ ಕೋರ್ಸಗಳ ಅವಧಿ ಎರಡು ವರ್ಷ ಇದ್ದಲ್ಲಿ ಎರಡನೆ ವರ್ಷಕ್ಕೆ ಮತ್ತು ಮೂರು ವರ್ಷಗಳ4 ಅವಧಿ ಇದ್ದಲ್ಲಿ ಎರಡು ಮತ್ತು ಮೂರನೇ ವರ್ಷಕ್ಕೆ ಮತ್ತು ನಾಲ್ಕು ವರ್ಷಗಳ ಅವಧಿ ಇದ್ದಲ್ಲಿ ಎರಡು, ಮೂರು ಮತ್ತು ನಾಲ್ಕನೇ ವರ್ಷಕ್ಕೆ ವಿಸ್ತರಣೆಗೆ ಸಂಬಂಧಿಸಿದ ಶುಲ್ಕ ಭರಿಸಬೇಕಾಗುತ್ತದೆ. ನಂತರ ಮಹಾವಿದ್ಯಾಲಯಗಳು ಮುಂದುವರಿಕೆಯನ್ನು ಪಡೆಯಬೇಕಾಗುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದ ಶುಲ್ಕಗಳನ್ನು ಭರಿಸಿ ನಂತರ ಮಹಾವಿದ್ಯಾಲಯಗಳು ಮುಂದುವರಿಕೆಯನ್ನು ನಿಗದಿತ ಶುಲ್ಕಗಳೊಂದಿಗೆ ಪಡೆಯಬೆಕಾಗುತ್ತದೆ.
4. ಸಂಯೋಜನಾ ಮುಂದುವರಿಕೆ/ ವಿಸ್ತರಣಾ ಅರ್ಜಿಯಲ್ಲಿ ಸರಿಯಾದ ಮಾಹಿತಿ ಒದಗಿಸಬೇಕು. ಮೂಲ ವಿಷಯ ಹಾಗೂ ಐಚ್ಛಿಕ ವಿಷಯಗಳನ್ನು ಪ್ರತ್ಯೇಕವಾಗಿ ನಮೂದಿಸಬೇಕು. ಒಂದು ವೇಳೆ ಅರ್ಜಿಯಲ್ಲಿ ಸರಿಯಾಗಿ ಮಾಹಿತಿ ನೀಡದೆ ಇದ್ದಲ್ಲಿ ಹಾಗೂ ಇದರಿಂದಾಗುವ ಗೊಂದಲಗಳಿಗೆ ಹಾಗೂ ಉಂಟಾಗುವ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೆ ಜವಾಬ್ದಾರರಾಗಿರುತ್ತಾರೆ.
5. ಸಂಯೋಜನಾ ಅರ್ಜಿಯೊಂದಿಗೆ ಹಿಂದಿನ ಮೂರು ವರ್ಷ ಪಡೆದುಕೊಂಡ ಸಂಯೋಜನಾ ಅಧಿಸೂಚನೆಯ ಪ್ರತಿಯನ್ನು ಮತ್ತು ಪ್ರವೇಶ ಮಿತಿ ಹೆಚ್ಚಳದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು ಹಾಗೂ ಸಂಯೋಜನೆಗೆ ಸಂಬಂಧಿಸಿದ ಬಾಕಿ ಶುಲ್ಕ ಪೂರ್ಣಗೊಳಿಸಬೇಕು.
6. ವಿಶ್ವವಿದ್ಯಾಲಯವು ಕಡ್ಡಾಯವಾಗಿ 2017-18 ನೇ ಶೈಕ್ಷಣಿಕ ಸಾಲಿನಿಂದ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳಿಗೆ ವಿಷಯಗಳನ್ನು ಸಮೂಹವಾರು ಅಳವಡಿಸಲಾಗಿದ್ದರಿಂದ ತಾವು ಸಲ್ಲಿಸುವ ಸಂಯೋಜನಾ ಅರ್ಜಿಯಲ್ಲಿ ಸಮೂಹವಾರು ವಿಷಯಗಳನ್ನು ನಮೂದಿಸಬೇಕೆಂದು ಹಾಗೂ ಅದು ವ್ಯತ್ಯಾಸವಾಗಿದ್ದಲ್ಲಿ ಸಮೂಹವಾರು ವಿಷಯಗಳನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ.
7. ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳನ್ನು ಹೊಂದಿರುವಂತಹ ಮಹಾವಿದ್ಯಾಲಯದವರು ಸರಕಾರ/ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಮಂಜೂರಾತಿಯಾದಂತಹ ವಿಷಯಗಳಿಗೆ ಮಾತ್ರ, ಗರಿಷ್ಠ ನಾಲ್ಕು ಅಥವಾ ಐದು ವಿಷಯಗಳ ಸಮೂಹಗಳನ್ನು ರಚಿಸಿ

ಅಂತಿಮಗೊಳಸಿದ ನಂತರ ಪ್ರತಿ ಸಮೂಹದಲ್ಲಿ ಒಂದು ವಿಷಯವನ್ನು ಗರಿಷ್ಠ ನಾಲ್ಕು ಬಾರಿಗಿಂತ ಹೆಚ್ಚುಬಾರಿ ಪುನರಾವರ್ತನೆ ಮಾಡದೇ (Repeat) ವಿಷಯಗಳ ಸಮೂಹವನ್ನು ರಚಿಸಿಕೊಳ್ಳುವಂತೆ ಸೂಚಿಸಲಾಗಿದೆ.

8. ವಿಶ್ವವಿದ್ಯಾಲಯ ನಿಗದಿಪಡಿಸಿದ ಎಲ್ಲ ಘಟಕಗಳಿಗೆ ಅಧಿಕಾರಿಗಳನ್ನು ನೇಮಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಕುರಿತಾಗಿ ದಾಖಲೆಗಳನ್ನು ಹೊಂದಿರಬೇಕೆಂದು ಸೂಚಿಸಲಾಗಿದೆ.

## III. ಶಾಶ್ವತ ಸಂಯೋಜನೆ ಅರ್ಜಿ ಸಲ್ಲಿಸುವ ಕುರಿತು.

1. ಸತತವಾಗಿ 5 ವರ್ಷಗಳ ತಾತ್ಕಾಲಿಕ ಸಂಯೋಜನೆಯನ್ನು ಪೂರೈಸಿದ ಮತ್ತು ಹಿಂದಿನ ಐದು ವರ್ಷಗಳ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದ ಕೋರ್ಸಗಳಿಗೆ/ ವಿಷಯಗಳಿಗೆ ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದಲ್ಲಿ ಮಾತ್ರ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.
2. ಸದರಿ ಮಹಾವಿದ್ಯಾಲಯದ ಆಡಳತ ಮಂಡಳಯು ಕರ್ನಾಟಕ ಸರ್ಕಾರದ ನೊಂದಣಿ ಕಾಯ್ದೆಗಳಂತೆ ನೊಂದಣಿಯಾಗಿದ್ದು, ನಿಯಾಮಾನುಸಾರವಾಗಿ ಕಾಲಕಾಲಕ್ಕೆ ನೋಂದಣಿಯನ್ನು ನವೀಕರಣ ಮಾಡಿಕೊಂಡಿರಬೇಕು ಹಾಗೂ ಆಡಳತ ಮಂಡಳಯ ಸಭೆಗಳನ್ನು ನಡೆಸಿರಬೇಕು ಹಾಗೂ ಕಾಯ್ದಿರಿಸಿದ ಸಭೆಗಳ ನಡಾವಳಗಳನ್ನು ಲಗತ್ತಿಸಿ ನೀಡುವುದು.
3. ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸಿದ್ದಲ್ಲಿ, ಮೊದಲು ಯು.ಜಿ.ಸಿ. ನಿಯಮದಂತೆ ಮಹಾವಿದ್ಯಾಲಯವು 2(ಎಫ್) ಮಾನ್ಯತೆ ಪಡೆದಿರಬೇಕು.
4. ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸಿದ್ದಲ್ಲಿ, ಮಹಾವಿದ್ಯಾಲಯಗಳು ಶಾಶ್ವತ ಸಂಯೋಜನೆಗೆ ಸಂಬಂಧಿಸಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಕಾಲಕಾಲಕ್ಕೆ ನಿಗದಿಗೊಳಸುವ ನಿಯಮಾವಳಗಳಂತೆ ಸ್ವಂತ ಭೂಮಿ, ಕಟ್ಟಡ, ಬೋಧಕ ಸಿಬ್ಬಂದಿ ಹಾಗೂ ಇತರೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಬೇಕು.
5. ಮಹಾವಿದ್ಯಾಲಯಗಳು ಶಾಶ್ವತ ಸಂಯೋಜನೆಗಾಗಿ ನ್ಯಾಕ್‌ನಿಂದ ಮಾನ್ಯತೆ ಪಡೆದಿರಬೇಕು. ಒಂದು ವೇಳೆ ಮಹಾವಿದ್ಯಾಲಯಗಳು ನ್ಯಾಕ್ ಮಾನ್ಯತೆಗಾಗಿ ಎಸ್.ಎಸ್.ಆರ್. ಸಲ್ಲಿಕೆ ಮಾಡಿದ್ದಲ್ಲಿ ಅಂತಹ ಮಹಾವಿದ್ಯಾಲಯಗಳೂ ಕೂಡಾ ಶಾಶ್ವತ ಸಂಯೋಜನೆ/ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಮಹಾವಿದ್ಯಾಲಯವು ನ್ಯಾಕ್ ಮಾನ್ಯತೆಗೆ ಸಲ್ಲಿಸಿದ ಅರ್ಜಿ ತಿರಸ್ಕೃತವಾದಲ್ಲಿ ಅಂತಹ ಮಹಾವಿದ್ಯಾಲಯದ ಶಾಶ್ವತ ಸಂಯೋಜನೆ ರದ್ದುಗೊಳಸಿ, ತಾತ್ಕಾಲಿಕ ಸಂಯೋಜನೆ ಮುಂದುವರೆಸಲಾಗುವುದು.
6. ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಪರಿಶೀಲನೆಗೆ ನಿಗದಿತ ಅರ್ಜಿಯ ನಮೂನೆಯಲ್ಲಿ, ಮಹಾವಿದ್ಯಾಲಯದಲ್ಲಿರುವ ಕೋರ್ಸಗಳನ್ನು, ವಿಷಯಗಳನ್ನು ಹಾಗೂ ಪ್ರವೇಶ ಸಂಖ್ಯೆಯನ್ನು ಸರಿಯಾಗಿ ಪರಿಶೀಲಿಸಿ ನಮೂದಿಸಬೇಕು.
7. ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಅರ್ಜಿಗಳೊಂದಿಗೆ, ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನಾ ಅಧಿಸೂಚನೆಗಳು, ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶಗಳು ಹಾಗೂ ಸಂಸ್ಥೆಯ/ ಮಹಾವಿದ್ಯಾಲಯದ ಲೆಕ್ಕ ಪರಿಶೋಧಕರಿಂದ ದೃಢಿಕರಿಸಿದ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಗಳನ್ನು ಪೂರ್ಣಗೊಳಸಿ ದೃಢೀಕರಿಸಿ ಲಗತ್ತಿಸಬೇಕು.
8. ಮಹಾವಿದ್ಯಾಲಯವು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರದ ನಿಯಮಾನುಸಾರವಾಗಿ ಕನಿಷ್ಠ 50% ರಷ್ಟು ಖಾಯಂ ಆಗಿ ನೇಮಕವಾದ ಸಿಬ್ಬಂದಿಗಳನ್ನು ಹೊಂದಿರಬೇಕು ಹಾಗೂ ನಿಯಮಗಳಿಗೆ ಅನುಗುಣವಾಗಿ ವೇತನ, ಪಿ.ಎಫ್, ಗ್ರಾಚುಯಿಟಿ, ಇ.ಎಸ್.ಐ. ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿರಬೇಕು.
9. ಹೀಗೆ ಎಲ್ಲಾ ಷರತ್ತುಗಳನ್ನು/ ನಿಯಮಗಳನ್ನು ಪಾಲಿಸಿದ ಮಹಾವಿದ್ಯಾಲಯಗಳಿಗೆ ನೀಡಬೇಕಾದ ಶಾಶ್ವತ ಸಂಯೋಜನೆಯು ವಿದ್ಯಾ ವಿಷಯಕ ಪರಿಷತ್ ಸಭೆ, ಸಿಂಡಿಕೇಟ್ ಸಭೆ ಹಾಗೂ ಸರ್ಕಾರದ ಅನುಮೋದನೆಗಳ ಶರತ್ತಿಗೆ ಒಳಪಟ್ಟಿರುತ್ತದೆ ಹಾಗೂ ಕಾಲಕಾಲಕ್ಕೆ ಯುಜಿಸಿ/ಸರಕಾರದವರು ಹೊರಡಿಸುವ ಆದೇಶಕ್ಕೆ ಒಳಪಟ್ಟಿರುತ್ತದೆ.

## IV. ಶಾಶ್ವತ ಸಂಯೋಜನೆ ಪರಿಶೀಲನೆಗೆ (Review) ಅರ್ಜಿ ಸಲ್ಲಿಸುವ ಕುರಿತು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ ಅಧಿನಿಯಮ 62(3) ರ ಮೇರೆಗೆ ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳ ಆಡಳತಾತ್ಮಕ ಹಾಗೂ ಶೈಕ್ಷಣಿಕ ಪ್ರಕಾರ್ಯಗಳನ್ನು ವಿಶ್ವವಿದ್ಯಾಲಯವು ಪರಿಶೀಲಿಸಬೇಕಾಗುತ್ತದೆ. ಕಾರಣ ಶಾಶ್ವತ ಸಂಯೋಜನೆಯನ್ನು ಪಡೆದುಕೊಂಡ ಮಹಾವಿದ್ಯಾಲಯಗಳು ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಶಾಶ್ವತ ಸಂಯೋಜನೆಯ ಪರಿಶೀಲನೆಗೆ ಹೊಸ ಶಾಶ್ವತ ಸಂಯೋಜನೆಗೆ ಸಂಬಂಧಿಸಿದ ಎಲ್ಲಾ ನಿಯಮಗಳೂ ಅನ್ವಯವಾಗುತ್ತವೆ.
3. ಮಹಾವಿದ್ಯಾಲಯಗಳು ತಮ್ಮ ಶಾಶ್ವತ ಸಂಯೋಜನೆಯು ಪೂರ್ಣಗೊಳ್ಳುವ ಒಂದು ವರ್ಷ ಮೊದಲೆ ಶಾಶ್ವತ ಸಂಯೋಜನಾ ಪರಿಶೀಲನಾ ಅರ್ಜಿಯನ್ನು ಸಂಬಂಧಿಸಿದ ಶುಲ್ಕಗಳೊಂದಿಗೆ ಭರಿಸಿ, ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು (**ಉದಾ:** ಶಾಶ್ವತ ಸಂಯೋಜನೆಯನ್ನು 2010-11 ರಲ್ಲಿ ಪಡೆದಿದ್ದಲ್ಲಿ 2014-15 ನೇ ಸಾಲಿಗೆ ಶಾಶ್ವತ ಸಂಯೋಜನೆಯು ಮುಕ್ತಾಯವಾಗುತ್ತಿದ್ದಲ್ಲಿ ತಾವು 2013-14 ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಸಂಯೋಜನೆ ಅಧಿಸೂಚನೆ ಪ್ರಕಟಿಸಿದಾಗ ಕಡ್ಡಾಯವಾಗಿ ಶಾಶ್ವತ ಸಂಯೋಜನೆ ಪರಿಶೀಲನೆಗೆ ಅರ್ಜಿ ಸಲ್ಲಿಸುವುದು).
4. ಪರಿಶೀಲನಾ ಸಮಯದಲ್ಲಿ ಮಹಾವಿದ್ಯಾಲಯಗಳು ಹಿಂದಿನ ಸ್ಥಳೀಯ ತನಿಖಾ ಸಮಿತಿಯು ವಿಧಿಸಿದ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರಬೇಕು.
5. ಮಹಾವಿದ್ಯಾಲಯಕ್ಕೆ ಶಾಶ್ವತ ಸಂಯೋಜನೆಯನ್ನು ನೀಡುವಾಗ ಸದರಿ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಸಭೆ, ಸಿಂಡಿಕೇಟ್ ಸಭೆಯ ಅನುಮೋದನೆ ಅನುಸಾರವಾಗಿ ಮುಂದುವರೆಸಲಾಗುವುದು. ಸದರಿ ಶಾಶ್ವತ ಸಂಯೋಜನಾ ಮುಂದುವರಿಕೆಯು ಸರ್ಕಾರದ ಅನುಮೋದನೆಯ ಷರತ್ತಿಗೆ ಒಳಪಟ್ಟಿರುತ್ತದೆ.
6. ಸರಕಾರದ ಸುತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017 ದಿನಾಂಕ: 07-07-2017 ರ ಪತ್ರದಂತೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಮುಂದುವರಿಕೆ ಅವಧಿಯು ನ್ಯಾಕ್ ಮಾನ್ಯತೆಯ ಗ್ರೇಡ್ ಆಧಾರದ ಮೇಲೆ ಅವಲಂಬಿತವಾಗಿರುವುದಾಗಿ

ಸೂಚಿಸಿರುವುದರಿಂದ ನ್ಯಾಕ್ ಸಂಸ್ಥೆಯಿಂದ "ಎ" ಗ್ರೇಡ್ ಮಾನ್ಯತೆ ಪಡೆದಲ್ಲಿ 5 ವರ್ಷ, "ಬಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 4 ವರ್ಷ, "ಸಿ" ಗ್ರೇಡ್ ಮಾನ್ಯತೆ ಪಡೆದಲ್ಲಿ 3 ವರ್ಷಗಳ ಅವಧಿಗೆ ಶಾಶ್ವತ ಸಂಯೋಜನೆ ಅವಧಿಯನ್ನು ನಿಗದಿಪಡಿಸಲಾಗುವುದು ಅಲ್ಲದೆ ಶಾಶ್ವತ ಸಂಯೋಜನೆಯ ಅವಧಿಯು ಸರಕಾರ/ ಯು.ಜಿ.ಸಿ. ಯಿಂದ ಕಾಲಕಾಲಕ್ಕೆ ಬದಲಾವಣೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.

7. ಶಾಶ್ವತ ಸಂಯೋಜನೆ ಮುಂದುವರಿಕೆ ಪರಿಶೀಲನೆಗಾಗಿ ಮಹಾವಿದ್ಯಾಲಯದವರು ನಿಗದಿತ ಸಮಯಕ್ಕೆ ಅರ್ಜಿ ಸಲ್ಲಿಸದಿದ್ದಲ್ಲಿ ಮುಂದೆ ಆಗು-ಹೋಗುಗಳಿಗೆ ಮಹಾವಿದ್ಯಾಲಯದವರೆ ಜವಾಬ್ದಾರರಾಗಿರುತ್ತಾರೆ.

## V. ಠೇವಣಿ ಹಣ ಕುರಿತು:

ಯಾವುದೇ ಸಂಘ/ ಸಂಸ್ಥೆಯವರು ಹೊಸ ಮಹಾವಿದ್ಯಾಲಯವನ್ನು/ ಕೋರ್ಸ ಪ್ರಾರಂಭಿಸಬೇಕೆಂದು ಇಚ್ಛಿಸಿ ಸಲ್ಲಿಸಿದ ಅರ್ಜಿಗೆ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆ ನೀಡಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಹೀಗೆ ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ, ಸರ್ಕಾರವು ಆದೇಶ ನೀಡಿದ ನಂತರ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯ ಸೂಚಿಸುವ ದಾಖಲೆಗಳನ್ನು ಹಾಗೂ ವಿಶ್ವವಿದ್ಯಾಲಯದಿಂದ ನಿಗದಿಪಡಿಸಿದ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಭರಿಸಬೇಕಾಗುತ್ತದೆ. ಹೊಸ ಮಹಾವಿದ್ಯಾಲಯ/ ಕೋರ್ಸ ಪ್ರಾರಂಭಿಸುವವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಠೇವಣಿ ಹಣವನ್ನು ಎರಡು ಕಂತುಗಳಲ್ಲಿ ನಿಗದಿತ ವರ್ಷಗಳಲ್ಲಿ ಭರಿಸಲು ಸೂಚಿಸಲಾಗಿದೆ. ಅಂದರೆ ಪ್ರಾರಂಭದಲ್ಲಿ ಒಟ್ಟು ಮೊತ್ತದ ಅರ್ಧದಷ್ಟು ಕಡ್ಡಾಯವಾಗಿ ಭರಣಾ ಮಾಡಿ ಉಳಿದ ಮೊತ್ತವನ್ನು ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ಮುಂದುವರಿಕೆ/ ವಿಸ್ತರಣೆ ಅರ್ಜಿಯೊಂದಿಗೆ ಭರಿಸಬೇಕಾಗುತ್ತದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಭರಿಸದೆ ಇದ್ದಲ್ಲಿ ಮಹಾವಿದ್ಯಾಲಯದವರು ಮೀರಿದ ಅವಧಿಗೆ ಪ್ರತಿ ವರ್ಷಕ್ಕೆ 10% ರಷ್ಟು ದಂಡ ಶುಲ್ಕವನ್ನು ಭರಿಸಬೇಕಾಗುತ್ತದೆ. ಸದರಿ ದಂಡ ಶುಲ್ಕವನ್ನು ಭರಿಸುವುದು ಮುಂದಿನ 2 ವರ್ಷಗಳ ಅವಧಿಗೆ ಸಿಮಿತವಾಗಿರುತ್ತದೆ. ಒಂದು ವೇಳೆ ಹೊಸ ಮಹಾವಿದ್ಯಾಲಯ /ಕೋರ್ಸ ಪ್ರಾರಂಭಿಸುವುದಾಗಿನಿಂದ ಒಟ್ಟು 3 ವರ್ಷಗಳ ಅವಧಿಯ ಒಳಗಡೆ ಸಂಯೋಜನಾ ಠೇವಣಿಯ 2ನೇ ಕಂತಿನ ಮೊತ್ತವನ್ನು ಭರಿಸದೆ ಹೊದಲ್ಲಿ, ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಮಹಾವಿದ್ಯಾಲಯದ ಮೇಲೆ ಯಾವುದೇ ರೀತಿ ಕ್ರಮ ಜರುಗಿಸಬಹುದು ಹಾಗೂ **ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಯಾವುದೇ ಮಹಾವಿದ್ಯಾಲಯದವರಿಗೆ ಠೇವಣಿ ಶುಲ್ಕದಲ್ಲಿ ಯಾವುದೇ ರೀತಿ ರಿಯಾಯತಿ ಇರುವುದಿಲ್ಲವೆಂದು ಸೂಚಿಸಲಾಗಿದೆ.**

## VI. ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳ ಸಮೂಹವಾರು ಕುರಿತು:

ಸರಕಾರದ ಆದೇಶ ಸಂಖ್ಯೆ: ED 39 egov2015 ದಿನಾಂಕ: 18-11-2015 ರ ಮುಖಾಂತರ ತಿಳಿಸಿದಂತೆ 2015-16 ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನೆ ಪ್ರಕ್ರಿಯೆಯನ್ನು ಅಂತರ್ಜಾಲದ ಮುಖಾಂತರ ಕೈಗೊಳ್ಳಲು ತಿಳಿಸಿರುವುದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2015-16 ಮತ್ತು 2016-17 ನೇ ಸಾಲಿನ ಸಂಯೋಜನೆ ಪ್ರಕ್ರಿಯೆಯನ್ನು ಅಂತರ್ಜಾಲದ ಮುಖಾಂತರ ಕೈಗೊಳ್ಳಲಾಗಿದೆ. 2020-21 ನೇ ಸಾಲಿನ ಸಂಯೋಜನೆ ಪ್ರಕ್ರಿಯೆಯನ್ನು ಸರಕಾರವದವರು ಅಂತರ್ಜಾಲದ ಮುಖಾಂತರ ಕೈಗೊಳ್ಳಲು ಸೂಚಿಸಿದಲ್ಲಿ ಮಹಾವಿದ್ಯಾಲಯದವರು 2020-21 ನೇ ಸಾಲಿನ ಸಂಯೋಜನೆ ಪ್ರಕ್ರಿಯೆಯನ್ನು ಅಂತರ್ಜಾಲದ ಮುಖಾಂತರ ಕೈಗೊಳ್ಳಬೇಕಾಗುತ್ತದೆ. ಇದಕ್ಕೆ ಮುಂದುವರೆದು ಸಂಯೋಜನೆ ಪ್ರಕ್ರಿಯೆಯನ್ನು ಅಂತರ್ಜಾಲದ ಮುಖಾಂತರ ಕೈಗೊಳ್ಳಬೇಕಾದಲ್ಲಿ ಸರಕಾರದವರು ಅಭಿವೃದ್ಧಿ ಪಡಿಸಿದ ತಂತ್ರಾಂಶದಲ್ಲಿ ಮಹಾವಿದ್ಯಾಲಯದವರು ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳ ವಿಷಯಗಳನ್ನು ಸಮೂಹವಾರು ಪ್ರವೇಶ ಮಿತಿಯೊಂದಿಗೆ ಅಳವಡಿಸಬೇಕಾಗುತ್ತದೆ. ಈಗಾಗಲೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2017-18 ನೇ ಶೈಕ್ಷಣಿಕ ಸಾಲಿನಿಂದ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳ ಹಾಗೂ ವಿಷಯಗಳ ಪ್ರವೇಶ ಮಿತಿಯನ್ನು ಸಮೂಹವಾರು ನಿಗದಿಪಡಿಸಿದ್ದು ಅದು ಜಾರಿಯಲ್ಲಿರುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ. ಕಾರಣ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳನ್ನು ಹೊಂದಿರುವ ಮಹಾವಿದ್ಯಾಲಯದವರಿಗೆ ಈ ಕೆಳಗಿನ ಸೂಚನೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ.

1. 2017-18 ನೇ ಶೈಕ್ಷಣಿಕ ಸಾಲಿಗೆ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳಿಗೆ ತಾವು ಸಮೂಹವಾರು ಪ್ರವೇಶ ಮಿತಿ ನಿಗದಿಪಡಿಸಿ ನೀಡಿದಂತೆ ತಮಗೆ 2017-18 ನೇ ಶೈಕ್ಷಣಿಕ ಸಾಲಿಗೆ ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳ 1 ಮತ್ತು 2 ನೇ ಸೆಮಿಸ್ಟರಗಳಿಗೆ ವಿಷಯಗಳ ಸಮೂಹವಾರು ಪ್ರವೇಶ ಮಿತಿ ನಿಗದಿಪಡಿಸಿ ಅಧಿಸೂಚನೆಯನ್ನು ನೀಡಲಾಗುತ್ತಿದ್ದು ಹಾಗೆ ಅಧಿಸೂಚನೆಯಲ್ಲಿ ಇರುವಂತೆಯೆ ಸಮೂಹವಾರು ಪ್ರವೇಶ ಮಿತಿಯನ್ನು ಸಂಯೋಜನಾ ಅರ್ಜಿಯಲ್ಲಿ ದಾಖಲಿಸುವುದು ಕಡ್ಡಾಯವಾಗಿದೆ.
2. ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳನ್ನು ಹೊಂದಿರುವಂತಹ ಮಹಾವಿದ್ಯಾಲಯದವರು ಸರಕಾರ/ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಮಂಜೂರಾತಿಯಾದಂತಹ ವಿಷಯಗಳಿಗೆ ಮಾತ್ರ, ಗರಿಷ್ಠ ನಾಲ್ಕು ಅಥವಾ ಐದು ವಿಷಯಗಳ ಸಮೂಹಗಳನ್ನು ರಚಿಸಿ ಅಂತಿಮಗೊಳಿಸಿದ ನಂತರ ಪ್ರತಿ ಸಮೂಹದಲ್ಲಿ ಒಂದು ವಿಷಯವನ್ನು ಗರಿಷ್ಠ ನಾಲ್ಕು ಬಾರಿಗಿಂತ ಹೆಚ್ಚುಬಾರಿ ಪುನರಾವರ್ತನೆ ಮಾಡದೆ (Repeat) ವಿಷಯಗಳ ಸಮೂಹವನ್ನು ರಚಿಸಿಕೊಳ್ಳುವಂತೆ ಸೂಚಿಸಲಾಗಿದೆ.
3. ಹಿಂದಿನ ಶೈಕ್ಷಣಿಕ ಸಾಲಿಗೆ ತಮಗೆ ನೀಡಲಾದ ಸಮೂಹವಾರು ಪ್ರವೇಶ ಮಿತಿಯನ್ನು ಕಡಿಮೆ ಮಾಡಲು ಅವಕಾಶ ಇರುವುದಿಲ್ಲ.
4. ಬಿ.ಎ. ಮತ್ತು ಬಿ.ಎಸ್ಸಿ. ಕೋರ್ಸಗಳಿಗೆ ಪ್ರವೇಶ ಮಿತಿ ಹೆಚ್ಚಳ ಬೇಕಾದಲ್ಲಿ ಸಮೂಹವಾರು ಪ್ರವೇಶ ಮಿತಿ ಹೆಚ್ಚಳಕ್ಕೆ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಬೇಕು.
5. ಹೊಸ ಐಚ್ಛಿಕ ವಿಷಯಗಳ ಸಂಯೋಜನಾ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಪ್ರವೇಶ ಮಿತಿ ಹೆಚ್ಚಳಕ್ಕೆ ಸಂಬಂಧಿಸಿದ ಶುಲ್ಕವನ್ನು ಸಹ ಭರಿಸಬೇಕಾಗುತ್ತದೆ.

## VII. ಮಹಾವಿದ್ಯಾಲಯಗಳು ಸ್ವಾಯತ್ತತೆ ಪಡೆಯುವುದಕ್ಕಾಗಿ ಇರುವ ಮಾರ್ಗಸೂಚಿಗಳ ವಿವರ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ವಾಯತ್ತತೆ (Autonomy) ಹೊಂದಲು ಇಚ್ಛಿಸುವ ಸಂಯೋಜಿತ ಮಹಾವಿದ್ಯಾಲಯಗಳಿಂದ ವಿಶ್ವವಿದ್ಯಾಲಯ ಧನಸಹಾಯ ಆಯೋಗ, ನವದೆಹಲಿ ಇವರು ತಮ್ಮ ಅಧಿಕೃತ ಜಾಲತಾಣದಲ್ಲಿ ಹೊರಡಿಸಿರುವ UGC Guidelines for Autonomous Colleges 2017 ಎಂಬ ಮಾರ್ಗಸೂಚಿಗಳ ಅನ್ವಯ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ಅರ್ಜಿ ಸಲ್ಲಿಸಲು ಇಚ್ಛಿಸುವ ಮಹಾವಿದ್ಯಾಲಯಗಳು ಈ ಕೆಳಗಿನ ಅರ್ಹತಾ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಿರಬೇಕಾಗಿರುತ್ತದೆ.

1. ಮಹಾವಿದ್ಯಾಲಯವನ್ನು ಸರಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು ಹಾಗೂ ನಿಗದಿತ ಶುಲ್ಕಗಳನ್ನು ಭರಿಸಬೇಕು.
2. ಯುಜಿಸಿ ಕಾಯ್ದೆಯ ಸೆಕ್ಷನ್ 2(ಎಫ್) ಅಡಿಯಲ್ಲಿ ಮಾನ್ಯತೆಯನ್ನು ಕಡ್ಡಾಯವಾಗಿ ಪಡೆದಿರಬೇಕು.
3. ಮಹಾವಿದ್ಯಾಲಯವನ್ನು ಪ್ರಾರಂಭಿಸಿ ಕನಿಷ್ಠ ಸತತ 10 ವರ್ಷಗಳ ಸಂಯೋಜನೆಯನ್ನು ಪೂರೈಸಿರಬೇಕು.
4. ಮಹಾವಿದ್ಯಾಲಯವು ನ್ಯಾಕ್ ಪ್ರಾಧಿಕಾರದಿಂದ ಪ್ರಸ್ತುತ ಚಾಲ್ತಿಯಲ್ಲಿರುವ "ಎ" ಗ್ರೇಡ್ ಮಾನ್ಯತೆಯನ್ನು ಹೊಂದಿರಬೇಕು.
5. ಮಹಾವಿದ್ಯಾಲಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ/ ಅರೆಕಾಲಿಕ ಬೋಧಕ ಸಿಬ್ಬಂದಿಯ ಸಂಖ್ಯೆಯು ಮಹಾವಿದ್ಯಾಲಯದ ಒಟ್ಟು ಬೋಧಕ ಸಿಬ್ಬಂದಿಯ ಶೇಕಡಾ ಹತ್ತನ್ನು(10%) ಮೀರಿರಬಾರದು.
6. ಯುಜಿಸಿ, ನವದೆಹಲಿ ಇವರು ವಿಧಿಸಿರುವ ಇನ್ನಿತರ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು.
7. ಸ್ವಾಯತ್ತತೆ ಪಡೆದ ಮಹಾವಿದ್ಯಾಲಯಗಳು ಐದು ವರ್ಷಕ್ಕೆ ಒಮ್ಮೆ ಪರಿಶೀಲನೆಗೆ ಒಳಪಟ್ಟು ತಮ್ಮ ಸ್ವಾಯತ್ತ ಸ್ಥಾನಮಾನವನ್ನು ಕಡ್ಡಾಯವಾಗಿ ನವೀಕರಿಸಿಕೊಳ್ಳಬೇಕು.

ಮೇಲ್ಕಾಣಿಸಿದ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಆಸಕ್ತ ಮಹಾವಿದ್ಯಾಲಯಗಳು UGC Guidelines for Autonomous Colleges 2017 ಇದರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ, ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಿ, ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು https://ugc.ac.in/pdfnews/2740071_Revised-Guidelines-for-autonomous-college-15-05-2017.pdf ನಲ್ಲಿ ಪಡೆಯಬಹುದಾಗಿದೆ.

## VIII. ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡೀಸ್ ಮತ್ತು ಪಿ.ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ ಪ್ರಾರಂಭಿಸುವ ಕುರಿತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತು ಕೇಂದ್ರ ಸರಕಾರವು ಯೋಗ ವಿದ್ಯೆಗೆ ಪ್ರಾಮುಖ್ಯತೆ ನೀಡುತ್ತಿರುವ ಹಿನ್ನಲೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಸಂದಂರ್ಭದಲ್ಲಿ ಯೋಗ ವಿದ್ಯೆಗೆ ಪ್ರಾಧಾನ್ಯತೆ ನೀಡುವ ದೃಷ್ಟಿಯಿಂದ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಿಗೆ ಶೇವಣಿ ಶುಲ್ಕ ರಹಿತ ಯೋಗಾ ಕೋರ್ಸನ್ನು ಪ್ರಾರಂಭಿಸಲು ಕರೆ ನೀಡಿ ಸೂಚಿಸಿದ್ದರ ಪ್ರಯುಕ್ತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡಿಸ್ ಕೋರ್ಸನ್ನು ಪ್ರಾರಂಭಿಸಲು ಇಚಿಸ್ಸುವಂತಹ ಮಹಾವಿದ್ಯಾಲಯದವರಿಗೆ ಶೇವಣಿ ಶುಲ್ಕ ರಹಿತವಾಗಿ ಸಂಯೋಜನಾ ಶುಲ್ಕದಲ್ಲಿ ಮಾತ್ರ 50% ರಿಯಾಯತಿಯೊಂದಿಗೆ ಸಂಯೋಜನೆ ನೀಡಲು ದಿನಾಂಕ: 07-07-2017 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಲಾಗಿದೆ. ಆದ್ದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬೆಳಗಾವಿ, ಬಾಗಲಕೋಟ ಮತ್ತು ವಿಜಯಪುರ ಜಿಲ್ಲೆಯಲ್ಲಿಯ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯದವರು ಅಥವಾ ಸರಕಾರದ ನಿಯಮಾವಳಿಯಂತೆ ಸಂಘ/ ಸಂಸ್ಥೆ/ ಟ್ರಸ್ಟ್ ಹೊಂದಿದವರು 2019-20 ನೇ ಶೈಕ್ಷಣಿಕ ಸಾಲಿನಿಂದ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡಿಸ್ ಪ್ರಾರಂಭಿಸಲು ಸಂಯೋಜಿತ ಮಹಾವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾವಿದ್ಯಾಲಯವು ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳ ಜೊತೆಗೆ ಅರ್ಹ ಶಿಕ್ಷರನ್ನು ಅಂದರೆ ಎಂ.ಎ. ಯೋಗ ಪದವಿ ಹೊಂದಿದ ಶಿಕ್ಷರನ್ನು ನೇಮಕ ಹೊಂದಿರುವ ಹಾಗೂ ಯೋಗಾ ಪ್ರಯೋಗಾಲಯ ಹೊಂದಿದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

## IX. ಸ್ನಾತಕೋತ್ತರ ಕೋರ್ಸ ಹೊಂದಿರುವ ಸಂಯೋಜಿತ ಮಹಾವಿದ್ಯಾಲಯದಲ್ಲಿ ಸಂಶೋಧನಾ ಕೇಂದ್ರ ಪಡೆಯವುದಕ್ಕಾಗಿ ಅರ್ಜಿ ಆಹ್ವಾನಿಸುತ್ತಿರುವ ಕುರಿತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಸ್ನಾತಕೋತ್ತರ ಕೋರ್ಸ ಸಂಯೋಜನೆ ಹೊಂದಿರುವಂತಹ ಮಹಾವಿದ್ಯಾಲಯದವರು ಸಂಶೋಧನಾ ಕೇಂದ್ರದ ಸ್ಥಾನಮಾನ ಪಡೆಯವುದಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತ ಮಹಾವಿದ್ಯಾಲಯಗಳು ಈ ಕೆಳಕಾಣಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

1. ಮಹಾವಿದ್ಯಾಲಯವನ್ನು ಸರಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು.
2. ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಿ ಕಡ್ಡಾಯವಾಗಿ ಐದು ವರ್ಷಗಳನ್ನು ಪೂರೈಸಿರಬೇಕು.
3. ಮಹಾವಿದ್ಯಾಲಯವು ಕನಿಷ್ಠ "ಬಿ" ಗ್ರೇಡ್ ನ್ಯಾಕ್ ಮಾನ್ಯತೆಯನ್ನು ಪಡೆದಿರಬೇಕು.
4. ಸ್ನಾತಕೋತ್ತರ ಕೋರ್ಸ ಹೊಂದಿರುವ ವಿಷಯಕ್ಕೆ ಮಾತ್ರ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬಹುದು.
5. ಸಂಶೋಧನಾ ಕೇಂದ್ರ ಪಡೆಯವುದಕ್ಕಾಗಿ ಅಗತ್ಯವಿರುವ ಪಿ.ಎಚ್.ಡಿ. ಪದವಿಯನ್ನು ಹೊಂದಿರುವ ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳನ್ವಯ ಮಾರ್ಗದರ್ಶಕರಾಗಲು (Guideship) ಅರ್ಹತೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಯನ್ನು ಕಡ್ಡಾಯವಾಗಿ ಹೊಂದಿರಬೇಕು.
6. ಸಂಶೋಧನಾ ಕೇಂದ್ರಕ್ಕೆ ಅನ್ವವಾಗುವಂತೆ ಸುಸಜ್ಜಿತ ಗ್ರಂಥಾಲಯದ ಕಟ್ಟಡ ಹೊಂದಿ, ಗ್ರಂಥಾಲಯದಲ್ಲಿ ಸಂಶೋಧನಾ ಕೇಂದ್ರಕ್ಕೆ ಬೇಕಾಗುವಷ್ಟು ಪುಸ್ತಕಗಳನ್ನು ಮತ್ತು ಜರ್ನಲ್‌ಗಳನ್ನು ಹೊಂದಿರಬೇಕು ಮತ್ತು ಗಣಕಯಂತ್ರ ಪ್ರಯೋಗಾಲಯ, ಅಂತರ್ಜಾಲದ ವ್ಯವಸ್ಥೆ, e-learning ವ್ಯವಸ್ಥೆಯ ಜೊತೆಗೆ ಸುಸಜ್ಜಿತ ಪ್ರಯೋಗಾಲಯದಂತಹ ಇನ್ನಿತರ ಎಲ್ಲ ಮೂಲಭೂತ ಮತ್ತು ಶೈಕ್ಷಣಿಕ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಶೋಧನಾ ಕೇಂದ್ರವನ್ನು ಪಡೆಯುವುದಕ್ಕಾಗಿ ಮತ್ತು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಸಂಸ್ಥೆಯ ಆಯವ್ಯಯದಲ್ಲಿ ಹಣವನ್ನು ಕಾಯ್ದಿರಿಸಿ ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರಬೇಕು.
8. ಸಂಶೋಧನಾ ಕೇಂದ್ರ ಪಡೆಯುವುದಕ್ಕಾಗಿ ಪ್ರತಿ ವಿಷಯಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

ಮೇಲ್ಕಾಣಿಸಿದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಸಂಶೊಧನಾ ಕೇಂದ್ರದ ಸ್ಥಾನಮಾನ ಪಡೆಯಲು ಇಚ್ಛಿಸುವ ಸಂಯೋಜಿತ ಮಹಾವಿದ್ಯಾಲಯಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ (www.rcub.ac.in) ಲಭ್ಯವಿರುವ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ, ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಿ, ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ ವಿಭಾಗದಲ್ಲಿ ಪಡೆಯಬಹುದಾಗಿದೆ.

## X. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಮಹಾವಿದ್ಯಾಲಯಗಳು College with Protential for Excellence (CPE) ಪ್ರಯೋಜನೆ ಪಡೆಯುವುದಕ್ಕಾಗಿ ಯು.ಜಿ.ಸಿ. ನಿಯಮಾವಳಿಯನ್ವಯ ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದಲ್ಲಿ ಈ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಧನ ಸಹಾಯ ಆಯೋಗ ಇವರ ಅಧಿಕೃತ ವೆಬ್‌ಸೈಟ್‌ನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುವುಂತೆ ಈ ಮೂಲಕ ತಿಳಿಸಲಾಗಿದೆ.

ಸಹಿ/–

**ಕುಲಸಚಿವರು**